## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ.4/2018

ಅ.ಸಾ : 2
ದೋಸಾ : 2

ದಿನಾಂಕ:**27/09/2024** ರಂದು ಸಾಕ್ಷಿ ಅಸಾ-**2** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದ: –**

21. ಈ ದಿವಸ ಟಿಬಿ ಬಾಕ್ಸನಿಂದ 4 - ರೂ.500/- ಮುಖಬೆಲೆಯ ನೋಟುಗಳನ್ನು ತರಿಸಿ, ಸಾಕ್ಷಿಗೆ ನಿಪಿ-8 ರಲ್ಲಿ ಬರೆದ 4 - ರೂ.500/- ಮುಖಬೆಲೆಯ ನೋಟುಗಳನ್ನು ಗುರುತಿಸಿದ್ದು, ಅವುಗಳನ್ನು ಮುಮಾ-11 ಅಂತಾ ಒಟ್ಟಿಗೆ ಗುರುತಿಸಲಾಯಿತು.

**ಪಾಟೀ ಸವಾಲು: 1 ನೇ ಆರೋಪಿ ಪರ: ಶ್ರೀ ಯು.ಎನ್.ಜಿ. ವಕೀಲರಿಂದ:–**

22. ಬಿ.ಇ.ಓ. ಕಛೇರಿಯಿಂದ ನನಗೆ ಲಿಖಿತವಾಗಿ ಎಸಿಬಿ ಕಛೇರಿಗೆ ಹೋಗಲು ಆದೇಶ ಕೊಟ್ಟಿಲ್ಲ. ಬಿ.ಇ.ಓ.ರವರು ಪೋನ ಮುಖಾಂತರ ಮೌಖಿಕವಾಗಿ ತಿಳಿಸಿ ಎಸಿಬಿ ಕಛೇರಿಗೆ ಹೋಗಲು ಸೂಚನೆ ಕೊಟ್ಟಿದ್ದರು. ನಮ್ಮ ಕಛೇರಿಯ ಚಲನ-ವಲನ ರಜಿಸ್ಟರನಲ್ಲಿ ನಾನು ಎಸಿಬಿ ಕಛೇರಿಗೆ ಹೋಗಲು ಬಿ.ಇ.ಓ.ರವರ ಸೂಚನೆಯನ್ನು ದಾಖಲು ಮಾಡಿಲ್ಲ.

23. ಎಸಿಬಿ ಪೊಲೀಸರು ನಮ್ಮನ್ನು ಕರೆಯಲು ಬಂದಿಲ್ಲ, ನಾನೇ ನೇರವಾಗಿ ಹೋಗಿರುತ್ತೇನೆ. ಎಸಿಬಿ ಕಛೇರಿ ತಲುಪಿದಾಗ ಮಧ್ಯಾಹ್ನ 2-00 ಘಂಟೆಯಾಗಿತ್ತು. ನಾನು ಎಸಿಬಿ ಕಛೇರಿಗೆ ಹೋದಾಗ, ಅಲ್ಲಿ ಯಾರು ಯಾರು ಇದ್ದರು ಅಂತಾ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಎಸಿಬಿ ಕಛೇರಿಗೆ ಹೋದ ಮೇಲೆ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ. ನಾನು ಎಸಿಬಿ ಕಛೇರಿಯಲ್ಲಿ ನಾನು ಯಾವುದೇ ದಾಖಲೆಯನ್ನು ಓದಿ ತಿಳಿದುಕೊಂಡಿಲ್ಲ.

24. ನಾನು ಕನ್ನಡ ವಿಷಯದ ಶಿಕ್ಷಕನಿರುತ್ತೇನೆ. ನನಗೆ ಸೋಡಿಯಂ ಕಾರ್ಬೋನೇಟ್ ಮತ್ತು ಪಿನಾಫ್ತಲಿನ್ ಪೌಡರ ಬಗ್ಗೆ ಮಾಹಿತಿ ಇಲ್ಲ. ಅದನ್ನು ಹೇಗೆ ಉಪಯೋಗ ಮಾಡುವುದು ಅಂತಾ ನನಗೆ

ಮಾಹಿತಿ ಇಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನನಗೆ ಅಲ್ಲಿ ತಿಳಿಸಿಕೊಟ್ಟರು. ಪಿನಾಪ್ಥಲಿನ್ ಪೌಡರ ಯಾವುದೇ ವ್ಯಕ್ತಿಯ ಕೈಗೆ ಹಚ್ಚಿಕೊಂಡರೆ ಅದು ಕಾಣುವುದಿಲ್ಲ ಅಂದರೆ ನಿಜ.

25. ನಿಪಿ-8 ರಲ್ಲಿ ಬರೆದಿರುವ ನೋಟುಗಳ ನಂಬರುಗಳನ್ನು ಈಗ ಹೇಳಲು ಬರುವುದಿಲ್ಲ. ಎಸಿಬಿ ಪೊಲೀಸರು ನನ್ನ ಸಮಕ್ಷಮ ಸೀಲು ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪರಿಚಯ ಇಲ್ಲದ ವ್ಯಕ್ತಿಯ ಧ್ವನಿಯನ್ನು ಸಿಡಿಯ ಸಂಭಾಷಣೆ ಅಥವಾ ಮೊಬೈಲ್ ದೂರವಾಣಿಯ ಸಂಭಾಷಣೆ ಯಲ್ಲಿ ಕೇಳಿದರೆ ಗುರುತಿಸಲು ಆಗುವುದಿಲ್ಲ ಎಂದರೆ ನಿಜ. ನನ್ನ ಸಮಕ್ಷಮ ಯಾವುದೇ ಮೊಬೈಲನ್ನು ಜಪ್ತಿಮಾಡಿಲ್ಲ.

26. ನಾನು ಸಂಭಾಷಣೆ ಕೇಳುವುದಕ್ಕಿಂತ ಮುಂಚೆ ಲ್ಯಾಪಟ್ಯಾಪನ್ನು ಮತ್ತು ಅದರಲ್ಲಿರುವ ವಿಷಯಗಳನ್ನು ಪರೀಕ್ಷೆ ಮಾಡಿಲ್ಲ. ಆ ದಿವಸ ಕೂಡ ನನಗೆ ಸಂಭಾಷಣೆ ಯಾವ ವ್ಯಕ್ತಿಗಳ ನಡುವೆ ಇದೆ ಅಂತಾ ಸ್ಪಷ್ಟವಾಗಿ ಕೇಳಿಲ್ಲ ಎಂದು ಸೂಚಿಸುವುದು ನಿಜ. ವಸ್ತುಗಳನ್ನು ಯಾವ ಚಿಹ್ನೆಯಿಂದ ಸೀಲು ಮಾಡಿದರು ಅಂತಾ ನನಗೆ ಹೇಳಲು ಆಗುವುದಿಲ್ಲ.

27. ಸಿಡಿ ಸಂಭಾಷಣೆಯನ್ನು ಎಷ್ಟು ಘಂಟೆಯವರೆಗೆ ಕೇಳಿಸಿದರು ಅಂತಾ ಹೇಳಲು ಆಗುವುದಿಲ್ಲ. ಸಂಭಾಷಣೆಯಲ್ಲಿ ಎನು ವಿಷಯವನ್ನು ಕೇಳಿದೆ ಅಂತಾ ನಾನು ಕಾಗದದಲ್ಲಿ ಬರೆದುಕೊಂಡಿಲ್ಲ ಎಂದರೆ ನಿಜ. ಪಂಚನಾಮೆಯನ್ನು ನಾನು ಎಸಿಬಿ ಕಛೇರಿಯಲ್ಲಿ ಹೇಳಿ ಬರೆಸಿಲ್ಲ. ಪಂಚನಾಮೆಗೆ ನಾನು ಮತ್ತು ಇನ್ನೊಬ್ಬ ನಿಂಗರಾಜ ಮಡಿವಾಳರ ಮಾತ್ರ ಸಹಿ ಮಾಡಿದ್ದು ಗೊತ್ತಿದೆ, ಉಳಿದ ವ್ಯಕ್ತಿಗಳು ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ.

28. ಪಂಚನಾಮೆಯಲ್ಲಿ ನಾನು ಹೇಳಿ ಬರಸದೇ ಇರುವುದಕ್ಕೆ ಅದರಲ್ಲಿ ಎನು ವಿಷಯ ಬರೆದಿದೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅದನ್ನು ಓದಿ ಹೇಳಿದರು. ಪಂಚನಾಮೆಯನ್ನು ಯಾರು ಓದಿ ಹೇಳಿದರು ಅಂತಾ ನನಗೆ ಈಗ ಹೇಳಲಾಗುವುದಿಲ್ಲ. ಆರೋಪಿ ನನಗೆ ಯಾವತ್ತೂ ಪರಿಚಯ ಇಲ್ಲ ಎಂದರೆ ನಿಜ.

29. ಮುಮಾ-3 ಮತ್ತು ಮುಮಾ-5 ಬಿಳಿ ಬಣ್ಣದ ದ್ರಾವಣ ಇವೆ ಎಂದರೆ ಸರಿ. ಎಸಿಬಿ ಕಛೇರಿಯಲ್ಲಿ ನಾನು ಮಧ್ಯಾಹ್ನ 2-30 ರಿಂದ 3-15 ರವರೆಗೆ ಇದ್ದೆ. ಪಂಚನಾಮೆಗೆ ಸಹಿಯನ್ನು ಎಸಿಬಿ ಕಛೇರಿಯಲ್ಲಿ ಎಷ್ಟು ಘಂಟೆಗೆ ಮಾಡಿದೆ ಅಂತಾ ನನಗೆ ಈಗ ಹೇಳಲು ಬರುವುದಿಲ್ಲ. ಬಂಕಾಪುರ ಶಹರವು ನನಗೆ ಪಂಚನಾಮೆಗೆ ಹೋಗುವುದಕ್ಕಿಂತ ಮುಂಚೆ ಪರಿಚಯ ಇಲ್ಲ.

30. ನಾನು ಎಸಿಬಿ ಪೊಲೀಸರು ಡಿಸೋಜಾ ಮತ್ತು ಅವರ ಸಿಬ್ಬಂದಿಗಳ ಜೊತೆ ಬಂಕಾಪುರಕ್ಕೆ ಹೋಗಿದ್ದೆ. ಸಿಬ್ಬಂದಿಗಳ ಹೆಸರು ಮತ್ತು ವಿಳಾಸ ಹೇಳಲು ಬರುವುದಿಲ್ಲ. ಬಂಕಾಪುರ ಶಹರ ತಲುಪಿದಾಗ ಮಧ್ಯಾಹ್ನ 4-30 ಆಗಿತ್ತು. ಆರೋಪಿ ಮನೆಗೆ ಹೋಗುವುದಕ್ಕಿಂತ ಮುಂಚಿತವಾಗಿ ಬಂಕಾಪುರದಲ್ಲಿ ನಾನು, ಎಸಿಬಿ ಪೊಲೀಸರಾದ ಡಿಸೋಜಾ ಜೊತೆಗೆ ಇದ್ದೆ ಎಂದು ಸೂಚಿಸುವುದು ನಿಜ.

31. ಎಸಿಬಿ ಪೊಲೀಸರ ಜೀಪು ಆರೋಪಿ ಮನೆಯಿಂದ ಅರ್ಧ ಕಿಮೀ ದೂರದಲ್ಲಿ ನಿಂತಿತ್ತು ಎಂದರೆ ನಿಜ. ಆರೋಪಿ ಮನೆಯಿಂದ ಎಸಿಬಿ ಪೊಲೀಸರ ಜೀಪು ಆಗಲೀ ಮತ್ತು ಜೀಪಿನಲ್ಲಿರುವ ವ್ಯಕ್ತಿಗಳು ಕಾಣುತ್ತಿರಲಿಲ್ಲ ಎಂದರೆ ನಿಜ. ಆರೋಪಿ ಮನೆಗೆ ಹೋದಾಗ ಸಂಜೆ 5-00 ಘಂಟೆ ಆಗಿತ್ತು. ಆರೋಪಿ ಮನೆಗೆ ನಾನು ಮತ್ತು ಚಾಸಾ-1 ರವರು ಹೋಗಿದ್ದೆವು. 15 ರಿಂದ 20 ಅಡಿ ದೂರದಲ್ಲಿರುವ ವ್ಯಕ್ತಿಗಳಿಗೆ ಎನು ಮಾತನಾಡುತ್ತಾರೆ ಅಂತಾ ಕೇಳಿಸುವುದಿಲ್ಲ ಎಂದರೆ ನಿಜ. ಆರೋಪಿ ಮನೆಯಿಂದ ನಾವು 15 ರಿಂದ 20 ಅಡಿ ದೂರ ಇದ್ದೆ ಎಂದು ಸೂಚಿಸುವುದು ನಿಜ.

32. 2 ನೇ ಆರೋಪಿ ಮನೆಯಲ್ಲಿ ಎನು ಮಾತನಾಡಿದರು ಎನ್ನುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನಿಜ. ನಾನು ಯಾವುದೇ ವ್ಯಕ್ತಿಗಳನ್ನು ಅಲ್ಲಿ ಹೋಗದಂತೆ ತಡೆದಿರುವುದಿಲ್ಲ. ಬಂಕಾಪುರದಲ್ಲಿ ಕೆಇಬಿ ಕಛೇರಿ ಯಾವ ಏರಿಯಾದಲ್ಲಿ ಇದೆ ಅಂತಾ ನನಗೆ ಮಾಹಿತಿ ಇಲ್ಲ ಎಂದರೆ ನಿಜ. ಸರಕಾರದ ಆದೇಶದ ಪ್ರಕಾರ ಸರಕಾರಿ ಕಛೇರಿಗಳು ಬೆಳಿಗ್ಗೆ 10-00 ರಿಂದ ಪ್ರಾರಂಭವಾಗಿ ಸಂಜೆ 5-30 ಕ್ಕೆ ಮುಗಿಯುತ್ತವೆ ಎಂದು ಸೂಚಿಸುವುದು ನಿಜ.

33. 2 ನೇ ಆರೋಪಿ ಮನೆಯಲ್ಲಿ ನಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಮಾಡಿಲ್ಲ ಎಂದು ಸೂಚಿಸುವುದು ನಿಜ. ನಿಪಿ-4 ರಲ್ಲಿ ಯಾರು ಯಾರು ಸಹಿ ಮಾಡಿದ್ದಾರೆ ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ನಿಪಿ-4 ನ್ನು ಕೂಡ ನಾನು ಹೇಳಿ ಬರೆಸಿಲ್ಲ ಎಂದರೆ ನಿಜ. ನಾನು ಹೇಳಿ ಬರಸದೇ ಇರುವುದಕ್ಕೆ ನಿಪಿ-4 ರಲ್ಲಿ ಎನು ವಿಷಯ ಇದೆ ಅಂತಾ ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ನಿಜ.

34. ನಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಮಾಡಿಲ್ಲ ಎಂದರೆ ನಿಜ. ಡಿಸೋಜಾ ಪೊಲೀಸರು ಅಲ್ಲಿ ಎನೇನು ಮಾಡಿದರು ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ಎಸಿಬಿ ಪೊಲೀಸರು ಅಲ್ಲಿಯೂ ಕೂಡ ಯಾವ ವಸ್ತುಗಳನ್ನು ಜಪ್ತಿಮಾಡಿದರು ಮತ್ತು ಯಾವ ಚಿಹ್ನೆಯನ್ನು ಹಾಕಿದರು ಅಂತಾ ನನಗೆ ಮಾಹಿತಿ ಇಲ್ಲ ಎಂದರೆ ನಿಜ.

35. ಯಾವ ಊರಿನ ಜಮೀನು, ಎನು ಕೆಲಸ ಬಾಕಿ ಇತ್ತು ಮತ್ತು ಎನು ಕೆಲಸ ಅನ್ನುವ ವಿಷಯ ನನಗೆ ಗೊತ್ತಿಲ್ಲ ಎಂದರೆ ನಿಜ. ಬಂಕಾಪುರ ಕೆಇಬಿ ಕಛೇರಿಯಲ್ಲಿ ಮಧ್ಯಾಹ್ನ 4-30 ರಿಂದ ಸಂಜೆ 6-30 ರವರೆಗೆ ಇದ್ದೆವು. ಬಂಕಾಪುರ ಕೆಇಬಿ ಕಛೇರಿಯಿಂದ ಸಂಜೆ 6-30 ಕ್ಕೆ ಬಿಟ್ಟು ಪುನಃ 2 ನೇ ಆರೋಪಿ ಮನೆಗೆ ಬಂದೆವು. ಆಗ ವೇಳೆ ರಾತ್ರಿ 7-00 ಘಂಟೆಯಾಗಿತ್ತು. ಅಲ್ಲಿ ರಾತ್ರಿ 8-00 ಘಂಟೆ ಯವರೆಗೆ ಇದ್ದೆವು. ಎಸಿಬಿ ಕಛೇರಿಗೆ ರಾತ್ರಿ 8-00 ಘಂಟೆ ನಂತರ ಮತ್ತು ಬೇರೆ ದಿನ ಹೋಗಿರುವುದಿಲ್ಲ. ನಿಪಿ-4 ಕ್ಕೆ ಎಸಿಬಿ ಕಛೇರಿಯಲ್ಲಿ ಎಲ್ಲರೂ ಸಹಿ ಮಾಡಿರುತ್ತಾರೆ ಎಂದರೆ ನಿಜ.

36. ದಿನಾಂಕಃ09/08/2017 ರಂದು ಎಸಿಬಿ ಕಛೇರಿಗೆ ಬಿ.ಇ.ಓ.ರವರ ಸೂಚನೆ ಮೇರೆಗೆ ಮಧ್ಯಾಹ್ನ 2-00 ಘಂಟೆಗೆ ಹೋದೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಸಿಬಿ ಕಛೇರಿಯಲ್ಲಿ ಚಾಸಾ-1 ಇದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಬಂಕಾಪುರ ಕೆಇಬಿ ಕಛೇರಿಗೆ ಯಾವುದೇ ಅರ್ಜಿ ಕೊಟ್ಟಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಚಾಸಾ-1 ರವರು ದೂರು ಕೊಟ್ಟಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

37. ನಮ್ಮ ಸಮಕ್ಷಮ ಚಾಸಾ-18 ರವರು ಸೋಡಿಯಂ ಕಾರ್ಬೊನೇಟ್ ಮತ್ತು ಪಿನಾಫ್ತಲಿನ್ ಪೌಡರನ್ನು ತೋರಿಸಿ ಪ್ರಕ್ರಿಯೆ ಹೇಳಿದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟುಗಳನ್ನು ಯಾರು, ಎಲ್ಲಿಂದ ತಂದರು ಅಂತಾ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ನೋಟುಗಳ ಮೇಲೆ ಪಿನಾಫ್ತಲಿನ್ ಪೌಡರನ್ನು ಸಿಂಪಡಿಸಿದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಧ್ವನಿಯನ್ನು ಗುರುತಿಸುವ ತಜ್ಞರಲ್ಲ ಎಂದರೆ ನಿಜ.

38. ನನ್ನ ಸಮಕ್ಷಮ ಯಾವುದೇ ಸಂಭಾಷಣೆಯನ್ನು ನಮಗೆ ಕೇಳಿಸಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಯಾವುದೇ ವಸ್ತುಗಳನ್ನು ಜಪ್ತಿಮಾಡಿ ನಮ್ಮ ಸಮಕ್ಷಮ ಸೀಲು ಮಾಡಿ ಪಂಚನಾಮೆ ತಯಾರಿಸಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನದಾಗಲೀ ಮತ್ತು ಇನ್ನೊಬ್ಬ ಪಂಚರ ಕೈಗಳನ್ನು ಎಸಿಬಿ ಕಛೇರಿಯಲ್ಲಿ ತೊಳೆಸಿಲ್ಲ ಮತ್ತು ಅದು ದ್ರಾವಣ ಗುಲಾಬಿ ಬಣ್ಣಕ್ಕೆ ಬಂದಿಲ್ಲ ಅಂತಾ ಸೂಚಿಸುವುದು ಸರಿಯಲ್ಲ.

39. ಎಸಿಬಿ ಕಛೇರಿಯಲ್ಲಿ ಪಂಚನಾಮೆ ತಯಾರಿಸಿದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು 2 ನೇ ಆರೋಪಿ ಮನೆಗೆ ಹೋದೆವು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ನೇ ಆರೋಪಿ ನಡುವೆ ಯಾವುದೇ ಹಣ

ಕೊಡುವ ವ್ಯವಹಾರ ಆಗಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಂಕಾಪುರ ಕೆಇಬಿ ಕಛೇರಿಯಲ್ಲಿ ಯಾವುದೇ ಸಿಗ್ನಲ್ ಮತ್ತು ಸೂಚನೆ ಕೊಟ್ಟಿಲ್ಲ ಎಂದು ಸೂಚಿಸುವುದು ಸರಿಯಲ್ಲ.

40. 2 ನೇ ಆರೋಪಿಯು ಬೈಕು ಹತ್ತಿಕೊಂಡು ಹೋಗಿದ್ದು ನಾನು ನೋಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. 2 ನೇ ಆರೋಪಿ ಬಂಕಾಪುರ ಕೆಇಬಿ ಕಛೇರಿಯಲ್ಲಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಹಣವನ್ನು ಜಪ್ತಿಮಾಡಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮುಂದೆ ಯಾವುದೇ ಹೇಳಿಕೆಯನ್ನು ಎಸಿಬಿ ಪೊಲೀಸರಿಗೆ ಕೊಟ್ಟಿಲ್ಲ ಎಂದು ಸೂಚಿಸುವುದು ಸರಿಯಲ್ಲ.

41. ನನ್ನ ಸಮಕ್ಷಮದಲ್ಲಿ ಎಸಿಬಿ ಪೊಲೀಸರು ಯಾವುದೇ ಪ್ರಕ್ರಿಯೆಯನ್ನು ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಸಮಕ್ಷಮದಲ್ಲಿ ನಿಪಿ-2 ಮತ್ತು ನಿಪಿ-4 ನಡೆದೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.